## ದಾರಿ

ಒಮ್ಮೆ ರಾಮನ ಹೆಂಡತಿ ಬೆಕ್ಕೊಂದನ್ನು ಮನೆಗೆ ತಂದಳು. ಅದನ್ನು ಕಂಡರಾಗದ ರಾಮ ಸಿಡಿಮಿಡಿಗೊಂಡಿದ್ದ. ಒಂದು ತಿಂಗಳ ನಂತರ ಅವನು ಹೆಂಡತಿಗೆ ತಿಳಿಯದಂತೆ ಎರಡು ಬಾರಿ ಅದನ್ನು ಎಲ್ಲೋ ಬಿಟ್ಟುಬಂದ. ಆದರೆ ಮೊಂಡು ಬೆಕ್ಕು ಹಿಂತಿರುಗಿ ಬಂದೇಬಿಟ್ಟಿತ್ತು. ಮೂರನೆಯ ಬಾರಿ ಅವನು ಅದನ್ನು ಸುಮಾರು ದೂರದಲ್ಲಿ ಎಲ್ಲೆಲ್ಲೋ ಸುತ್ತಾಡಿಸಿ ಬಿಟ್ಟು– 'ಈಗ ನಿನಗೆ ದಾರಿ ಗೊತ್ತಾದರೆ ತಾನೇ ಹಿಂತಿರುಗಿ ಬರುವುದು?' ಎಂದು ಖುಷಿಯಿಂದ ಹಿಂತಿರುಗಿದ. ಬಹಳ ಹೊತ್ತಾದರೂ ಗಂಡ ಬರಲಿಲ್ಲವಲ್ಲ ಎಂದು ಅವನ ಹೆಂಡತಿ ಫೋನ್ ಮಾಡಿ– 'ರೀ ಎಲ್ಲಿದ್ದೀರಾ? ಒಂದು ಗಂಟೆಯ ಮುಂಚೆ ಬೆಕ್ಕಿನ ಜೊತೆ ಹೋದವರು ಬೆಕ್ಕು ವಾಪಸ್ಸು ಬಂದರೂ ಇನ್ನೂ ನೀವು ಬಂದಿಲ್ಲವಲ್ಲ?' ಎಂದು ಕೇಳಿದಳು. ಹತಾಶನಾದ ರಾಮ ಅಲವತ್ತುಕೊಳ್ಳುತ್ತ– 'ಎಲ್ಲಾ ನನ್ನ ಗ್ರಹಚಾರ ಕಣೇ! ಮನೆಯ ದಾರಿ ತಪ್ಪಿಸಿಕೊಂಡು ಒದ್ದಾಡ್ತಾ ಇದ್ದೀನಿ...' ಎಂದ.

**ಎಂ.ಕೆ. ಮಂಜುನಾಥ್, ಬೆಂಗಳೂರು**





ಚಿತ್ರಗಳು: ಗಣೇಶ ಆಚಾರ್ಯ

## ನಿಮಗೇಕೆ?

ನ್ಯಾಯಾಲಯ ಕಿಕ್ಕಿರಿದು ತುಂಬಿತ್ತು. ಕಳ್ಳನೊಬ್ಬನ ವಿಚಾರಣೆ ನಡೆಯುತ್ತ ಇತ್ತು. ನ್ಯಾಯಾಧೀಶರು ಕಳ್ಳನನ್ನುದ್ದೇಶಿಸಿ, 'ಮನೆಯಲ್ಲಿ ಜನರಿರುವಾಗಲೇ ನೀನು ಅದ್ಹೇಗೆ ಕಳ್ಳತನ ಮಾಡಿದೆ ಎಂಬುದನ್ನು ಸ್ವಲ್ಪ ಹೇಳು ನೋಡೋಣ' ಎಂದಾಗ ಆ ಕಳ್ಳ, 'ಸ್ವಾಮಿ ನಿಮ್ಮ ನೌಕರಿಯೂ ಚೆನ್ನಾಗಿದೆ, ಸಂಬಳವೂ ಚೆನ್ನಾಗಿದೆ, ನಮ್ಮ ವಿದ್ಯೆ ಕಲಿತು ನಿಮಗೇನಾಬೇಕಾಗಿದೆ' ಎಂದಾಗ ಅಲ್ಲಿದ್ದವರಿಗೆ ನಗುವುದೋ ಅಳುವುದೋ ತಿಳಿಯದಾಯಿತು.

**ಪಿ. ಜಯವಂತ ಪೈ, ಕುಂದಾಪುರ**